ಮುಟ್ಟುವಂತಿವೆ. ಹೀಗಾಗಿ ಕುಮಾರವ್ಯಾಸ ಭಾರತದಂತೆಯೇ ಈ ಕೃತಿಯನ್ನೂ ಕಾಲದಿಂದ ಕಾಲಕ್ಕೆ ವಿದ್ವಾಂಸರು ಗಮಕಿಗಳಿಗೆ ಮತ್ತು ಸಹೃದಯರಿಗೆ ಸಂಪಾದಿಸಿ ಒದಗಿಸುತ್ತ ಬಂದಿದ್ದಾರೆ.

1914ರಲ್ಲಿಯೇ ಸಂಪಾದಕರ ಹೆಸರೇ ಇಲ್ಲದೆ 'ಕನ್ನಡ ಪದ್ಯ ಕಾವ್ಯಗಳಲ್ಲಿ ಸರಸಾಲಂಕಾರ ಚಿತ್ರ ಚಮತ್ಕಾರವಾಗಿ ಲಕ್ಷ್ಮೀಶನೆಂಬ ಮಹಾಕವಿಯಿಂದ ರಚಿಸಲ್ಪಟ್ಟು ಪ್ರಸಿದ್ಧವಾಗಿರುವ ಜೈಮಿನಿ ಭಾರತವು ಲೇಖಕ ಪ್ರಮಾದಗಳಿಲ್ಲದಂತೆ ಪಂಡಿತರಿಂದ ಪರಿಷ್ಕರಿಸಲ್ಪಟ್ಟು ಬೆಂಗಳೂರು ಚಿಕ್ಕಪೇಟೆ ಬುಕ್‌ಡಿಪೋದಿಂದ ಮುದ್ರಣ ಮಾಡಲ್ಪಟ್ಟಿದೆ. ಇದರ ಬೆಲೆ 12 ಆಣೆ' ಎಂದಿದೆ. ಈ ಪುಸ್ತಕದಲ್ಲಿ ಪದ್ಯಗಳು ಗದ್ಯದ ಸಾಲುಗಳಂತೆ ಛಾಪಿಸಲ್ಪಟ್ಟಿದೆ. ಇದರೊಂದಿಗೆ 1956ರಲ್ಲಿ ಕುಮಾರವ್ಯಾಸ ಭಾರತವು ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದಂತೆ ಜೈಮಿನಿ ಭಾರತವು ಒಂದು ರೂ. ಬೆಲೆಯ ಮೇಲೆ ಪಂಡಿತ ಬಿ. ಶಿವಮೂರ್ತಿ ಶಾಸ್ತ್ರಿಗಳ ದೀರ್ಘ ಪ್ರಸ್ತಾವನೆಯ ಸಂಪಾದಕತ್ವದೊಡನೆ ಪ್ರಕಟವಾಯಿತು. 1993ರಲ್ಲಿ ಬಿ.ಎಸ್. ಸಣ್ಣಯ್ಯ ಮತ್ತು ರಾಗೌ ಅವರ ಸಂಪಾದಕತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಈ ಜೈಮಿನಿ ಕೃತಿಯನ್ನು ಪ್ರಕಟಿಸಿತು. ತದನಂತರ

